## ಸುದ್ದಿ ಸಿಂಚನ

### ಅನುದಾನಿತ ಪದವಿ ಪೂರ್ವ ಕಾಲೇಜು ನೌಕರರ ಸಭೆ

**ದೊಡ್ಡಬಳ್ಳಾಪುರ:** ಕರ್ನಾಟಕ ರಾಜ್ಯ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನೌಕರರ ಸಂಘದ ಎರಡನೇ ರಾಜ್ಯ ಮಟ್ಟದ ಪೂರ್ವಭಾವಿ ಸಭೆ ತುಮಕೂರಿನಲ್ಲಿ ನಡೆಯಲಿದೆ ಎಂದು ಸಂಘದ ರಾಜ್ಯ ಉಪಾಧ್ಯಕ್ಷ ಹಾಗೂ ಶ್ರೀ ಕೊಂಗಾಡಿಯಪ್ಪ ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥ ಎಸ್.ಬೋರಪ್ಪ ತಿಳಿಸಿದ್ದಾರೆ. ತುಮಕೂರಿನಲ್ಲಿ ನಡೆಯುವ ರಾಜ್ಯಮಟ್ಟದ ಪೂರ್ವಭಾವಿ ಸಭೆ ಕುರಿತು ಮಾತನಾಡಿ, ಅ.20ರಂದು ಭಾನುವಾರ ಬೆಳಗ್ಗೆ 11 ಗಂಟೆಗೆ ತುಮಕೂರಿನ ರವೀಂದ್ರ ಕಲಾನಿಕೇತನ, ಆರ್.ಟಿ.ನಗರ (ಸರ್ವೋದಯ ಪದವಿ ಪೂರ್ವ ಕಾಲೇಜಿನ ಹತ್ತಿರ) ಸಭೆ ನಡೆಯಲಿದೆ. ಸಭೆಯಲ್ಲಿ ಅನುದಾನಿತ ನೌಕರರ ಪ್ರಸ್ತುತ ಸಮಸ್ಯೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ ಸರ್ಕಾರದ ಗಮನ ಸೆಳೆದು ಪರಿಹಾರ ಕಂಡುಕೊಳ್ಳಲಾಗುವುದು. ಕರ್ನಾಟಕ ರಾಜ್ಯ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನೌಕರರ ಸಂಘದ ರಾಜ್ಯ ಮಟ್ಟದ ಸಮಾವೇಶದಲ್ಲಿ ಕೈಗೊಳ್ಳುವ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ಯೋಜನೆ ರೂಪಿಸಲಾಗುತ್ತದೆ. ಕರ್ನಾಟಕ ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನೌಕರರ ರಾಜ್ಯಮಟ್ಟದ ಸಮಾವೇಶದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ, ನೆಲಮಂಗಲ, ದೇವನಹಳ್ಳಿ ಹಾಗೂ ಹೊಸಕೋಟೆ ತಾಲ್ಲೂಕಿನ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನೌಕರರು ಭಾಗವಹಿಸಬೇಕೆಂದು ಕೋರಿದ್ದಾರೆ. ಸಮಾವೇಶದಲ್ಲಿ ಕರ್ನಾಟಕ ರಾಜ್ಯ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ನೌಕರರ ಸಂಘದ ಎಲ್ಲಾ ಪದಾಧಿಕಾರಿಗಳು ಮತ್ತು ಜಿಲ್ಲಾ ಘಟಕಗಳ ಅಧ್ಯಕ್ಷರು ಕಾರ್ಯದರ್ಶಿಗಳು ಮತ್ತು ಎಲ್ಲ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

### ಮಾಲತಿ ಮಾಧವ ನಾಟಕ ಯಶಸ್ವಿ ಪ್ರದರ್ಶನ

**ಹೊಸಕೋಟೆ:** ಮೂಲತಃ ಸಂಸ್ಕೃತ ನಾಟಕದ ಭವಭೂತಿಯನ್ನು ಕನ್ನಡಕ್ಕೆ ಮಾಲತಿ ಮಾಧವ ಹೆಸರಲ್ಲಿ ನೀಸಾಂನ ಕೆ.ವಿ.ಅಕ್ಷರ ರೂಪಾಂತರಿಸಿ ನಿರ್ದೇಶಿಸಿದ್ದು, ನಾಟಕಕ್ಕೆ ಕಲಾವಿದರ ಜೀವ ತುಂಬಿದ್ದಾರೆ ಎಂದು ಜನಪದರು ರಂಗಮಂದಿರದ ಅಧ್ಯಕ್ಷ ಕಾಟಂನಲ್ಲೂರು ಪಾಪಣ್ಣ ಪ್ರಶಂಶಿಸಿದರು. ಜನಪದರು ರಂಗಮಂದಿರದಲ್ಲಿ ಆಯೋಜಿಸಿದ್ದ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನೀನಾಸಂ ನಾಟಕವೆಂದರೆ ತಾಂತ್ರಿಕವಾಗಿ ಕ್ಲಾಸಿಕ್ ಆಗಿರುತ್ತವೆ ಎಂಬ ರಂಗಾಸಕ್ತರ ನಿರೀಕ್ಷೆಯನ್ನು ಈ ನಾಟಕ ಮತ್ತೊಮ್ಮೆ ಧೃಡಪಡಿಸಿದೆ. ಎರಡು ಗಂಟೆಗಳಷ್ಟು ಸುಧೀರ್ಘವಾದ ನಾಟಕವಾದರೂ ಆರಂಭದಿಂದ ಅಂತ್ಯದವರೆಗೂ ಪ್ರೇಕ್ಷಕರು ತದೇಕ ಚಿತ್ತದಿಂದ ಗ್ರಹಿಸಿ, ಚಪ್ಪಾಳೆ ತಟ್ಟುತ್ತಾ ಮತ್ತು ಶಿಳ್ಳೆ ಹೊಡೆಯುತ್ತಾ ಕಲಾವಿದರನ್ನು ಪ್ರೋತ್ಸಾಹಿಸಿದ್ದು ತುಂಬಾ ಹೆಮ್ಮೆ ಎಂದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಸಿದ್ದೇಶ್ವರ ನನಸುಮನೆ, ಎಂ.ಸುರೇಶ್, ಶಿವಕುಮಾರ್‌ತಾವರೆಕೆರೆ, ಶಿವಕುಮಾರ್, ಮುನಿರಾಜಪ್ಪ, ಕೆ.ಸುರೇಶ, ರಾಜಣ್ಣ ಹಾಜರಿದ್ದರು.

# ಮಾಗಡಿಗೆ ದಿನಬಳಕೆಗಷ್ಟೇ ನೀರು ಸರಬರಾಜು

## ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಶುದ್ಧೀಕರಣ ಕಾಮಗಾರಿ | ಕಲುಷಿತ ನೀರು ಮಂಚನಬೆಲೆ ಜಲಾಶಯದಿಂದಲೇ ಹರಿಸುವುದು ಅನಿವಾರ್ಯ

• **ಎಚ್.ಆರ್.ಮಾದೇಶ್**
**ಕನ್ನಡಪ್ರಭ ವಾರ್ತೆ** ಮಾಗಡಿ

ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಮಂಚನಬೆಲೆ ಜಲಾಶಯಕ್ಕೆ ತಿಪ್ಪಗೊಂಡನಹಳ್ಳಿ ಜಲಾಶಯದ ಕಲುಷಿತ ನೀರು ಸೇರುತ್ತಿರುವುದರಿಂದ ಕುಡಿಯುವ ನೀರಿನ ಯೋಜನೆಗೆ ಈಗ ಗ್ರಹಣ ಹಿಡಿದಿದೆ.


ತಿಪ್ಪಗೊಂಡನಹಳ್ಳಿ ಜಲಾಶಯ ಶುದ್ಧೀಕರಣ ಕಾಮಗಾರಿ ಮಾಡುತ್ತಿರುವುದರಿಂದ ಕಲುಷಿತ ನೀರು ನೇರವಾಗಿ ಮಂಚನಬೆಲೆ ಜಲಾಶಯಕ್ಕೆ ಬಿಡುತ್ತಿರುವುದರಿಂದ ಮಂಚನಬೆಲೆ ಜಲಾಶಯದ ನೀರು ಕಲುಷಿತವಾಗುತ್ತಿದ್ದು ಜಲಾಶಯದಲ್ಲಿ ದುರ್ವಾಸನೆ ಬೀರುತ್ತಿದೆ. ಇದೇ ನೀರನ್ನು ಮಾಗಡಿ ಪಟ್ಟಣಕ್ಕೆ ಸರಬರಾಜು ಮಾಡುತ್ತಿದ್ದು ತಿಪ್ಪಗೊಂಡನಹಳ್ಳಿ ಜಲಾಶಯ ಕಾಮಗಾರಿ ಪೂರ್ಣವಾಗುವವರೆಗೂ ಸಮಸ್ಯೆ ಮಾತ್ರ ತಪ್ಪಿದ್ದಲ್ಲ. ಕಲುಷಿತ ನೀರನ್ನು ಬೇರೆ ಯಾವುದೇ ಮಾರ್ಗವಾಗಿ ಬಿಡಲು ಅವಕಾಶ ಇಲ್ಲದ ಕಾರಣ ಮಂಚನಬೆಲೆ ಜಲಾಶಯಕ್ಕೇ ಕಲುಷಿತ ನೀರು ಬಿಡಲಾಗುತ್ತಿದೆ. ಮಳೆ ಹೆಚ್ಚಾದ್ದರಿಂದ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನೀರು ಹೆಚ್ಚಾಗಿ ಬರುತ್ತಿದ್ದು ಕಲುಷಿತ ನೀರಿನೊಂದಿಗೆ ಮಂಚನಬೆಲೆಯಲ್ಲಿದ್ದ ಶುದ್ದ ನೀರು ಕೂಡ ಕಲುಷಿತಗೊಂಡಿದೆ. ಜಲಾಶಯದ ನೀರು ಮಲಿನಗೊಂಡಿದ್ದು ಕುಡಿಯಲು ಯೋಗ್ಯವಾಗಿಲ್ಲ ಎಂಬುದು ಸಾರ್ವಜನಿಕ ಆರೋಪವಾಗಿದೆ.

**ಅಧಿಕಾರಿಗಳು ಮೌನ:** ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಮಂಚನಬೆಲೆ ಜಲಾಶಯಕ್ಕೆ ಕಲುಷಿತ ನೀರು ಬರುತ್ತಿದ್ದರೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ತಿಪ್ಪಗೊಂಡನಹಳ್ಳಿ ಜಲಾಶಯದ ನೀರು ಮಂಚನಬೆಲೆ ಜಲಾಶಯದ ಮೂಲಕವೇ ತಮಿಳುನಾಡಿಗೆ ಸೇರಲಿದೆ. ಕುಮುದ್ವತಿ ನದಿಗೆ ಅಡ್ಡಲಾಗಿ ಮಂಚನಬೆಲೆ ಜಲಾಶಯ ನಿರ್ಮಾಣ ಮಾಡಿದ್ದು ತಿಪ್ಪಗೊಂಹಳ್ಳಿ ಜಲಾಶಯದ ನೀರು ಸರಿ ಹೋಗುವವರೆಗೂ ಈ ಸಮಸ್ಯೆ ತಪ್ಪಿದ್ದಲ್ಲ. ಕಾಮಗಾರಿ ಮುಗಿದು ಬೆಂಗಳೂರಿಗೆ ನೀರು ಸರಬರಾಜು ಮಾಡುವ ಕಾರ್ಯ ಆರಂಭವಾದರೆ ಜಲಾಶಯದ ನೀರೆಲ್ಲಾ ಖಾಲಿಯಾಗಿ ಹೊಸ ನೀರು ಬಂದ ಮೇಲೆ ಈ ಸಮಸ್ಯೆ ಬಗೆಹರಿಯುತ್ತದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

**ಶುದ್ಧ ನೀರು ಬರುತ್ತಿಲ್ಲ:** ಮಾಗಡಿ ಪುರಸಭೆ ಮಂಚನಬೆಲೆ ಜಲಾಶಯದಿಂದ ಮಾಗಡಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜ ಮಾಡುತ್ತಿದೆ. ಹಲವು ವರ್ಷಗಳಿಂದಲೂ ಕುಡಿಯುವ ನೀರಿನ ಶುದ್ಧೀಕರಣವನ್ನು ಸೂಕ್ತ ರೀತಿಯಲ್ಲಿ ಅನುಸರಿಸದ ಕಾರಣ ಪಟ್ಟಣದ ಜನತೆ ಮಂಚನಬೆಲೆ ಜಲಾಶಯದ ನೀರನ್ನು ಕುಡಿಯಲು ಬಳಸುತ್ತಿಲ್ಲ. ದಿನನಿತ್ಯದ ಬಳಕೆಗೆ ಮಾತ್ರ ಬಳಸುತ್ತಿದ್ದರು.

**ಮಂಚನಬೆಲೆಗೆ ಕಾವೇರಿ, ಎತ್ತಿನಹೊಳೆ ನೀರು:** ಮಂಚನಬೆಲೆ ಜಲಾಶಯಕ್ಕೆ ಕಾವೇರಿ ಯೋಜನೆ ಮೂಲಕ ನೀರು ತುಂಬಿಸುತ್ತಿದ್ದು, ಕಣ್ವ ಜಲಾಶಯದ ಮೂಲಕ ಕಾವೇರಿ ನೀರು ಯೋಜನೆಗೆ ಲೋಕಸಭಾ ಚುನಾವಣೆಗೂ ಮುನ್ನ ಮಾಜಿ ಸಂಸದ ಡಿ.ಕೆ.ಸುರೇಶ್ ಹಾಗೂ ಶಾಸಕ ಎಚ್.ಸಿ. ಬಾಲಕೃಷ್ಣ ಚಾಲನೆ ನೀಡಿದ್ದರು. ಈಗ ಎತ್ತಿನಹೊಳೆ ಮೊದಲ ಹಂತದ ಯೋಜನೆಗೆ ಚಾಲನೆ ನೀಡಿದ್ದು, ಎತ್ತಿನಹೊಳೆ ಯೋಜನೆ ಮೂಲಕ ತಿಪ್ಪಗೊಂಡನಹಳ್ಳಿ ಹಾಗೂ ಮಂಚನಬೆಲೆ ಜಲಾಶಯಕ್ಕೆ ನೀರು ತುಂಬಿಸಲಾಗುತ್ತದೆ. ಮಂಚನಬೆಲೆ ಜಲಾಶಯಕ್ಕೆ ಮುಕ್ಕಾಲು ಟಿಎಂಸಿ ನೀರು ನಿಗದಿ ಮಾಡಲಾಗಿದೆ. ಕಲುಷಿತ ನೀರು ಜಲಾಶಯಕ್ಕೆ ಸೇರದಂತೆ ನೋಡಿಕೊಂಡರೆ ಎರಡು ಯೋಜನೆಗಳು ಜಾರಿ ಮಾಡಿದ್ದಕ್ಕೂ ಸಾರ್ಥಕವಾಗಲಿದೆ. ಪಟ್ಟಣದ ಜನತೆ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜನತೆ ಈ ಜಲಾಶಯವನ್ನು ಕುಡಿಯುವುದಕ್ಕೆ ಬಳಕೆ ಮಾಡಿಕೊಳ್ಳಬಹುದು. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಜಲಾಶಯ ಉಳಿವಿಗಾಗಿ ಕ್ರಮ ಕೈಗೊಳ್ಳಲು ಸಾರ್ವಜನಿಕರು ಒತ್ತಾಯಿಸಿದ್ದಾರೆ.

**ಶುದ್ಧ ನೀರು ಘಟಕಕ್ಕೆ ಮೊರೆ:** ಮಂಚನಬೆಲೆ ಜಲಾಶಯದ ನೀರು ಕಲುಷಿತಗೊಂಡಿರುವ ಹಿನ್ನೆಲೆಯಲ್ಲಿ ಮಾಗಡಿ ಪಟ್ಟಣದ ಜನತೆ ಶುದ್ಧ ನೀರು ಘಟಕಗಳಲ್ಲಿ ಕುಡಿಯುವ ನೀರಿಗೆ ಮೊರೆ ಹೋಗಿದ್ದಾರೆ.


ಮಾಗಡಿ ತಾಲೂಕಿನ ಮಂಚನಬೆಲೆ ಜಲಾಶಯದಲ್ಲಿ ಶೇ.80ರಷ್ಟು ನೀರು ಸಂಗ್ರಹವಾಗಿರುವುದು.

> ತಿಪ್ಪಗೊಂಡನಹಳ್ಳಿ ಜಲಾಶಯ ಶುದ್ಧೀಕರಣದಿಂದ ಕಲುಷಿತ ನೀರು ನೇರವಾಗಿ ಮಂಚನಬೆಲೆ ಜಲಾಶಯಕ್ಕೆ ಬರುತ್ತಿದೆ. ಅಲ್ಲಿ ಕಾಮಗಾರಿ ಮುಗಿಯುವವರೆಗೂ ಈ ಸಮಸ್ಯೆ ತಪ್ಪುವುದಿಲ್ಲ. ಕಾವೇರಿ ನೀರಾವರಿ ನಿಗಮ ಮಂಚನಬೆಲೆ ಜಲಾಶಯ ನಿರ್ವಹಿಸುತ್ತಿದೆ. ಇದು ಬೆಂಗಳೂರು ಜಲ ಮಂಡಳಿ ನಿರ್ವಹಿಸುತ್ತಿರುವುದರಿಂದ ಕಾಮಗಾರಿಗಳ ಬಗ್ಗೆ ನಮಗೆ ಮಾಹಿತಿ ಸಿಗುವುದಿಲ್ಲ. ಈಗ ಜಲಾಶಯದಲ್ಲಿ ಶೇ. 80ರಷ್ಟು ನೀರು ಸಂಗ್ರಹವಾಗಿದೆ.
> • **ರಾಘವೇಂದ್ರ,** ಇಂಜಿನಿಯರ್, ಕಾವೇರಿ ನೀರಾವರಿ ನಿಗಮ

> ಮಂಚನಬೆಲೆ ಜಲಾಶಯಕ್ಕೆ ಶುದ್ಧ ನೀರನ್ನೇ ಬಿಡಬೇಕು ಎಂದು ಬೆಂಗಳೂರು ಜಲ ಮಂಡಳಿ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿ ರೈತ ಸಂಘದಿಂದ ಪ್ರತಿಭಟನೆ ಮಾಡಿದ್ದೇವೆ. ತಿಪ್ಪಗೊಂಡನಹಳ್ಳಿಯ ಕಲುಷಿತ ನೀರನ್ನೇ ಮಂಚನಬೆಲೆ ಜಲಾಶಯಕ್ಕೆ ಬಿಡುವುದರಿಂದ ಆ ಜಲಾಶಯವನ್ನೂ ಕಲುಷಿತ ಮಾಡಿದ್ದಾರೆ. ಕಾಮಗಾರಿ ಮುಗಿದು ಶುದ್ಧ ನೀರು ಬರುವವರೆಗೂ ಮಾಗಡಿ ಪಟ್ಟಣ ಜನತೆಗೆ ಶುದ್ಧ ಕುಡಿವ ನೀರು ಲಭ್ಯವಿಲ್ಲ.
> • **ಹೊಸಪಾಳ್ಯ ಲೋಕೇಶ್** ತಾಲೂಕು ಅಧ್ಯಕ್ಷ, ರೈತ ಸಂಘ

> ಹಲವು ಬಾರಿ ಪುರಸಭೆ ಪಿಡಿರವರಿಗೂ ಮಾಗಡಿ ಪಟ್ಟಣಕ್ಕೆ ಶುದ್ಧ ಕುಡಿಯುವ ನೀರು ಬರುತ್ತಿಲ್ಲ ಎಂದು ದೂರು ನೀಡಲಾಗಿದೆ. ಜಲಾಶಯದ ನೀರನ್ನು ಶುದ್ಧೀಕರಿಸುವ ಕೆಲಸ ಮಾಡುತ್ತಿಲ್ಲ. ಮಂಚನಬೆಲೆ ಜಲಾಶಯದ ನೀರನ್ನು ಕುಡಿಯಲು ಬಳಸಿಕೊಂಡರೆ ಮನುಷ್ಯನಿಗೆ ರೋಗಗಳು ಕಟ್ಟಿಟ್ಟ ಬುತ್ತಿ. ಪಟ್ಟಣಕ್ಕೆ ಶುದ್ಧ ಕುಡಿಯುವ ನೀರು ಪೂರೈಸುವ ಜವಾಬ್ದಾರಿಯನ್ನು ಅಧಿಕಾರಿಗಳು ಕೂಡಲೇ ಮಾಡಬೇಕು.
> • **ಕೆ.ವಿ.ಬಾಲು** ಪುರಸಭೆ ಸದಸ್ಯರು, ಮಾಗಡಿ

# 6ನೇ ದಿನಕ್ಕೆ ಕಾಲಿಟ್ಟ ದಸಂಸ ಅನಿರ್ದಿಷ್ಟಾವಧಿ ಧರಣಿ

## ಮನವಿ ಸ್ವೀಕರಿಸಿದ ಅಪರ ಜಿಲ್ಲಾಧಿಕಾರಿ ಚಂದ್ರಯ್ಯ ಹಾಗೂ ನಗರಸಭೆ ಪೌರಾಯುಕ್ತ ಡಾ.ಜಯಣ್ಣ

• **ಕನ್ನಡಪ್ರಭ ವಾರ್ತೆ** ರಾಮನಗರ

ಹಕ್ಕು ಪತ್ರ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ನೇತೃತ್ವದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ 6ನೇ ದಿನಕ್ಕೆ ಕಾಲಿಟ್ಟಿದೆ.

ನಗರದ 1ನೇ ವಾರ್ಡಿನ ಅರ್ಕಾವತಿ ಬಡಾವಣೆಯಲ್ಲಿ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ಹಾಗೂ ಬಡಾವಣೆ ನಿವಾಸಿಗಳು ನಡೆಸುತ್ತಿರುವ ಧರಣಿ ಅಪರ ಜಿಲ್ಲಾಧಿಕಾರಿ ಚಂದ್ರಯ್ಯ ಹಾಗೂ ರಾಮನಗರ ನಗರಸಭೆ ಪೌರಾಯುಕ್ತ ಡಾ.ಜಯಣ್ಣ ಭೇಟಿ ನೀಡಿ ಮನವಿ ಸ್ವೀಕರಿಸಿದರು.

ಈ ವೇಳೆ ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಪುನೀತ್ ರಾಜ್ ಮಾತನಾಡಿ, ನಗರದ ವಾರ್ಡ್ 1ರಲ್ಲಿ ಮೂರು ತಲೆಮಾರುಗಳಿಂದ ವಾಸವಾಗಿರುವ 15 ದಲಿತ ಕುಟುಂಬಗಳಿಗೆ ಹಕ್ಕುಪತ್ರ ನೀಡಬೇಕು ಹಾಗೂ ಅನಧಿಕೃವಾಗಿ ಬೇರೆಯವರಿಗೆ ಖಾತೆ ಮಾಡಿ ಕೊಟ್ಟಿರುವ ನಗರಸಭೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನಿವೇಶನದ ಹಕ್ಕುಪತ್ರ ನೀಡುವಂತೆ ನಿವಾಸಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ವರ್ಷಗಳಿಂದ ಮನವಿ ಸಲ್ಲಿಸುತ್ತಲೇ ಬಂದಿದ್ದಾರೆ. ಜಾಗವು ಸರಕಾರಿ ಹಳ್ಳವಾಗಿದ್ದು, ಹಕ್ಕುಪತ್ರ ನೀಡಲು ಬರುವುದಿಲ್ಲವೆಂದು ಮನವಿಯನ್ನು ತಿರಸ್ಕರಿಸುತ್ತಾ ಬಂದಿದ್ದಾರೆ ಎಂದು ದೂರಿದರು.

ಇನ್ನು ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳು ಸಮಸ್ಯೆ ಇರುವ ಸ್ಥಳವನ್ನು ಪರಿಶೀಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಚಂದ್ರಯ್ಯ, ಸಮಸ್ಯೆಯನ್ನು ಶೀಘ್ರವೇ ಬಗೆಹರಿಸಿ ಕೊಡಲಾಗು ವುದು. ಈ ಸಂಬಂಧ ಎಡಿಎಲ್‌ಆರ್‌ಗೆ ಕಳುಹಿಸು ತ್ತೇನೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆ ಬಗೆಹರಿಸಿ ಕೊಡುವಂತೆ ಸೂಚಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಬೆಂಗಳೂರು ವಿಭಾಗಿಯ ಸಂಚಾಲಕ ಸೋಮಶೇಖರ್, ದಲಿತ ಮುಖಂಡರಾದ ಅಂಜನಾಪುರವಾಸು, ಕೊತ್ತೀಪುರ ಗೋವಿಂದರಾಜು, ಸಂಘಟನೆಯ ಪದಾಧಿಕಾರಿಗಳಾದ ಮರಿಸ್ವಾಮಯ್ಯ. ನವೀನ್, ಮಾಗಡಿ ನರಸಿಂಹಯ್ಯ, ಚನ್ನಪಟ್ಟಣ ಪ್ರಸಾದ್, ಶಿವು ಜಗದಾಪುರ, ವಿಶ್ವ ಮತ್ತಿತರರು ಭಾಗವಹಿಸಿದ್ದರು.


ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ಮತ್ತು ಬಡಾವಣೆ ನಿವಾಸಿಗಳು ಅಪರ ಜಿಲ್ಲಾಧಿಕಾರಿ ಚಂದ್ರಯ್ಯ ಅವರಿಗೆ ಮನವಿ ಸಲ್ಲಿಸಿದರು.

# ಬಡ್ಡಿ ಹಣ ಕಟ್ಟಿಲ್ಲವೆಂದು ಹಲ್ಲೆ: ಮೂವರ ವಿರುದ್ಧ ಮಹಿಳೆ ದೂರು

• **ಕನ್ನಡಪ್ರಭ ವಾರ್ತೆ** ಕನಕಪುರ

ಮೂರು ತಿಂಗಳಾದರೂ ಬಡ್ಡಿ ಹಣ ಕಟ್ಟಿಲ್ಲ ಎಂದು ಮಾರಕಾಸ್ತ್ರಗಳಿಂದ ವ್ಯಕ್ತಿ ಮೇಲೆ ಹಲ್ಲೆ ನಡೆಸಿರುವ ಸಂಬಂಧ ಮೂವರು ಆರೋಪಿಗಳ ವಿರುದ್ಧ ಹಲ್ಲೆಗೊಳಗಾದ ವ್ಯಕ್ತಿಯ ಪತ್ನಿ ಪದ್ಮಾ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಕಸಬಾ ಹೋಬಳಿ ಕಲ್ಲಹಳ್ಳಿ ಗ್ರಾಮದ ಕುಮಾರ್‌ಹಲ್ಲೆಗೊಳಗಾದವರು. ಅದೇ ಗ್ರಾಮದ ರಘು ಮತ್ತು ಕುಮಾರ್ ಹಾಗೂ ಕೂತಗನಹಳ್ಳಿ ಶ್ರೀನಿವಾಸ್ ಹಲ್ಲೆ ಮಾಡಿದವರು.


ಆಟೋ ರಿಪೇರಿಗೆಂದು ನನ್ನ ಪತಿ ಕುಮಾರ್ ಅವರು ವಾರದ ಬಡ್ಡಿಯಡಿ ಆರೋಪಿ ರಘು ಅವರಿಂದ 60 ಸಾವಿರ ರು. ಒಂದು ವರ್ಷದ ಹಿಂದೆ ಸಾಲ ಪಡೆದಿಡಿದ್ದರು. ಒಂದು ವರ್ಷದಿಂದ ಬಡ್ಡಿ ಕಟ್ಟಿದ್ದಾರೆ. ಕಳೆದ ಮೂರು ತಿಂಗಳಿಂದ ಬಡ್ಡಿ ಕಟ್ಟಿಲ್ಲ ಎಂದು ರಘು ಮತ್ತು ಆತನ ಸಹಚರರಾದ ಕುಮಾರ್ ಮತ್ತು ಶ್ರೀನಿವಾಸ್ ಅ.11ರಂದು ರಾತ್ರಿ ಮಾರಕಾಸ್ತ್ರಗಳೊಂದಿಗೆ ಮನೆಯ ಬಳಿ ಬಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಬಿಯರ್ ಬಾಟಲಿನಿಂದ ಎರಡು ಮೂರು ಬಾರಿ ನನ್ನ ಪತಿ ಕುಮಾರ್ ಬೆನ್ನಿಗೆ ಚುಚ್ಚಿ ಗಾಯಗೊಳಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ದೊಣ್ಣೆ ಮತ್ತು ರಾಡಿನಿಂದ ಹಲ್ಲೆ ಮಾಡಿದ್ದಲ್ಲದೆ, ನಿನ್ನನ್ನು ಸುಮ್ಮನೆ ಬಿಡುವುದಿಲ್ಲ ಎಂದು ಎಳೆದಾಡಿದರು. ನನ್ನ ಗಂಡನಿಗೆ ಏನು ಮಾಡಬೇಡಿ ನಿಮ್ಮ ಬಡ್ಡಿ ಹಣ ಕೊಡುತ್ತೇನೆ ಎಂದು ಕೇಳಿಕೊಂಡರು ಬಿಡದೆ ನನ್ನ ಜುಟ್ಟು ಹಿಡಿದು ಎಳೆದಾಡಿದರು. ನಮ್ಮ ನೆರವಿಗೆ ಬಂದ ಅಕ್ಕ ಪಕ್ಕದವರಿಗೆ ಕೈಯಲ್ಲಿದ್ದ ಆಯುಧ ಗಳನ್ನು ತೋರಿಸಿ ಬೆದರಿಸಿದ್ದು, ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ತಮ್ಮ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಬೇಕೆಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

- ಕಲ್ಲಹಳ್ಳಿ ಗ್ರಾಮದ ಕುಮಾರ್ ಹಲ್ಲೆಗೊಳಗಾದವರು
- ಅದೇ ಗ್ರಾಮದ ರಘು ಮತ್ತು ಕುಮಾರ್ ಹಾಗೂ ಕೂತಗನಹಳ್ಳಿಯ ಶ್ರೀನಿವಾಸ್ ಹಲ್ಲೆ ಮಾಡಿದವರು
- ವರ್ಷದ ಹಿಂದೆ ಆಟೋ ರಿಪೇರಿಗೆಂದು 60 ಸಾವಿರ ರು. ಬಡ್ಡಿಗೆ ಪಡೆದಿದ್ದ ಕುಮಾರ್
- 3 ತಿಂಗಳಿಂದ ಬಡ್ಡಿ ಕಟ್ಟಿಲ್ಲವೆಂದು ರೊಚ್ಚಿಗೆಂದು ಹಣ ಕೊಟ್ಟಿದ್ದ ರಘು ಮತ್ತು ಸಹಚರರು

# ಬೇವೂರು ತಿಮ್ಮಪ್ಪಸ್ವಾಮಿ ಬ್ರಹ್ಮರಥೋತ್ಸವ

## ಬ್ರಹ್ಮರಥೋತ್ಸವಕ್ಕೆ ತಹಸೀಲ್ದಾರ್ ನರಸಿಂಹಮೂರ್ತಿ ಚಾಲನೆ


ಚನ್ನಪಟ್ಟಣ ತಾಲೂಕಿನ ಬೇವೂರು ಗ್ರಾಮದ ಬೆಟ್ಟದ ತಿಮ್ಮಪ್ಪಸ್ವಾಮಿಯ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು. ರಥೋತ್ಸವಕ್ಕೆ ತಹಸೀಲ್ದಾರ್ ನರಸಿಂಹಮೂರ್ತಿ ಚಾಲನೆ ನೀಡಿದರು.

• **ಕನ್ನಡಪ್ರಭ ವಾರ್ತೆ** ಚನ್ನಪಟ್ಟಣ

ತಾಲೂಕಿನ ಬೇವೂರು ಗ್ರಾಮದ ಇತಿಹಾಸ ಪ್ರಸಿದ್ಧ ಬೆಟ್ಟದ ತಿಮ್ಮಪ್ಪಸ್ವಾಮಿಯ ಬ್ರಹ್ಮ ರಥೋತ್ಸವ ಸೋಮವಾರ ವಿಜೃಂಭಣೆಯಿಂದ ನೆರವೇರಿಸಲಾಯಿತು.

ಬೆಳಿಗ್ಗೆ 9 ಗಂಟೆಯಿಂದ 11 ಗಂಟೆವರೆಗೆ ರಥಶಾಂತಿ ಪೂಜೆ ನಡೆಯಿತು. ಬಳಿಕ ಮಧ್ಯಾಹ್ನ 12.30ರ ಅಭಿಜಿನ್ ಲಗ್ನದಲ್ಲಿ ಬ್ರಹ್ಮ ರಥೋತ್ಸವ ನಡೆಯಿತು. ರಥೋತ್ಸವಕ್ಕೆ ತಹಸೀಲ್ದಾರ್ ನರಸಿಂಹಮೂರ್ತಿ ಚಾಲನೆ ನೀಡಿದರು. ರಥಕ್ಕೆ ಭಕ್ತರು ಹಣ್ಣುಜವನ ಎಸೆದು ಹರಕೆ ತೀರಿಸಿ ಭಕ್ತಿಭಾವ ಮೆರೆದರು.

ರಥೋತ್ಸವದ ಹಿನ್ನೆಲೆಯಲ್ಲಿ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ರಥೋತ್ಸವದ ಅಂಗವಾಗಿ ವಸ್ತ್ರಾಲಂಕಾರ, ಗಜೋತ್ಸವ, ಗರುಡೋತ್ಸವ, ಕಲ್ಯಾಣೋತ್ಸವ, ಮುತ್ತಿನ ಪಲ್ಲಕ್ಕಿ ಉತ್ಸವ, ವಿದ್ಯುತ್ ದೀಪಾಲಂಕಾರ, ಬೆಳ್ಳಿಪಲ್ಲಕ್ಕಿ ಉತ್ಸವ, ಪಾನಕಸೇವೆ, ಬಾಣ-ಬಿರುಸು, ಸಿಡಿಮದ್ದು, ಅನ್ನಸಂತರ್ಪಣೆ, ಮಕ್ಕಳಿಗೆ ಹಾಲು ವಿತರಣೆ, ನೈವೇದ್ಯ, ಪ್ರಸಾದ ವಿನಿಯೋಗ ನಡೆಯಿತು. ಕಲಾವಿದರಿಂದ ಜಾನಪದ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ಗಾಯಕರಿಂದ ಗೀತಗಾಯನ, ರಸ ಮಂಜರಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ರಥೋತ್ಸವಕ್ಕೆ ಆಗಮಿಸಿದ್ದ ಭಕ್ತಾದಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಸಹಸ್ರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದು ಪುನೀತರಾದರು.

ರಥೋತ್ಸವದಲ್ಲಿ ಬೇವೂರು ಮಠದ ಮೃತ್ಯುಂಜಯ ಶಿವಾಚಾರ್ಯ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್, ಬಿಎಂಐಸಿಪಿಐ ಅಧ್ಯಕ್ಷ ರಘುನಂದನ್ ರಾಮಣ್ಣ, ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಜಿಲ್ಲಾಧ್ಯಕ್ಷ ಯೋಗೇಶ್ ಗೌಡ, ಕಾಂಗ್ರೆಸ್ ಮುಖಂಡ ಕರುಣ್ ಆನಂದ್, ದೇವಸ್ಥಾನದ ಮೇಲ್ವಿಚಾರಕ ಬಿ.ಸಿ.ಪುಟ್ಟಸ್ವಾಮಿ, ಅರ್ಚಕ ವೆಂಕಟೇಶ್ ಮೊದಲಾದವರು ಪಾಲ್ಗೊಂಡಿದ್ದರು.


**IN THE COURT OF THE PRINCIPAL SENIOR CIVIL JUDGE AT ANEKAL**
**O.S. No. 421/2023**
**BETWEEN : Smt. Meenakashi** D/o Late Munipapaiah, & Another **...PLAINTIFFS**
**AND : Sri. Prasanna Kumar** S/o Late Munipapaiah & Others **...DEFENDANTS**
**NOTICE / SUMMONS TO THE DEFENDANT No. 1 TO 3**
**1. Sri. Prasanna Kumar** S/o Late Munipapaiah Aged about 36 years, R/at No.339, Munikumar Building, 4th Cross, GPR Layout, Near Subha Essence Apartment, Chandrapura, Anekal Taluk, Bengaluru-560009.
**2. Renuka .M,** D/o Late Munipapaiah, W/o Chandrashekar, Aged about 40 years, R/at No.945/22, Chandrapura, Anekal Taluk, Bengaluru-560009.
**3. Smt. Anupama,** W/o K.Srinivasa Reddy Aged about 42 years, R/at No. 123, Shettehalli Village, Marasuru Post, Kasaba Hobli, Anekal Taluk, Bengaluru Urban District.
The Above named Plaintiff instituted a suit against the Defendants for the relief of partition and separate possession and other relief.
You are hereby summoned to appear before this Court **on 21.01.2025 at 11.00 AM** in person or through advocate to answer the question to the same. Failing which the suit will be heard and determined as ex-parte.
**SCHEDULE PROPERTY**
All the piece and parcel of the site bearing No.945/22, Old Janjar No. 1156, New Janjar No. 1156, Municipal Assessment Katha No. 1350/945/22, as per the Form No. 1 and 12 and Janjar No. 1157 as per the Sale Deed, situated at Chandapura Village, Attibele Hobli, Anekal Taluk, Bengaluru Urban District, consisting of three floors houses measuring East to West 30 feet and North to South 40 feet in all measuring 1200 sq.feet RCC roofed house constructed thereon consisting of three floors and the same is bounded on the :- **East by :** Site No.945/21, **West by** : Site No. 945/23, **North by** : Road, **South by** : Private property.
Given under my hand and seal of the court, this 07.10.2024.
**By Order of the Court, Chief Ministerial Officer, Senior Civil Judge & JMFC Court, Anekal.**
Advocate for Plaintiff :
**Prema Kumar D S,** Advocate
No.216, 1st Floor, 4th Cross, Cubbonpet, Bengaluru-560002.

**IN THE COURT OF THE PRINCIPAL SENIOR CIVIL JUDGE AND JMFC AT DEVANAHALLI**
**O.S. No. 47/2015**
**Between : Sri. MUNIRAJAPPA ...Plaintiff**
**And: Sri. Venkatappa** Since died by his LR s **...Defendant**
To,
**NOTICE TO PROPOSED DEFENDANT No. 2 AND 3**
**2. Smt. Asha,** D/o Late. K. Venkatappa, W/o Ravi G.M, Aged about 48 years, R/at No.5, 5th Cross, Maruthy Extension, Near Maleshwaram Railway Station, Bangalore-21.
**3. Smt. KAMALA,** D/o Late. K. Venkatappa, W/o Narayanareddy, Aged about 46 years, R/at No.72, Jakur Layout, 8th Cross, Talakaveri Layout, Yalahanka.
Whereas, the plaintiff have instituted suit for the relief of declaration by way of adverse possession and such other consequential reliefs in respect of the suit schedule properties bearing Sy.No. 21/1 measuring 0-16 guntas, situated at Nallappanahaili Village, Channarayapatna Hobli, Devanahaili Taluk, Bangalore Rural Dist, bounded on East by : property belongs to Venkatappa, West by : A scheduledar Basavarajappa, North By Chimachanahalli Nelle, South by: Road, and Sy.No. 21/2 measuring 0-32 guntas situated at Nallappanahalli Village, Channarayapatna Hobli, Devanahaili Taluk, Bangalore Rural Dist., bounded on East by : property belongs to Venkatappa, West by: A scheduledar Basavarajappa, North By : Chimachanahalli Nelle, South by: Road, and Sy.No. 21/3 measuring 1 acre-28 guntas situated at Nallappanahalli Village, Channarayapatna Hobli, Devanahaili Taluk, Bangalore Rural Dist, bounded on :- East by : property belongs to Venkatappa, West by: A scheduledar Basavarajappa, North By : Chimachanahalli Nelle, South by: Road you are here by summoned to appear in this court in person or by a pleader **on 07.11.2024 at 11.00 a.m.** to answer claims and as the day fixed for your appearance is appointed for the final disposal of the case, take summons that, in default of your appearance on the day afore mentioned, the matter will be heard and determined in your absence placing you as Ex-parte.
Given under my hand and seal of the court on the 14.10.2024.
**By Order of the Court, Chief Ministerial Officer, Senior Civil Judge & JMFC Court, Devanahalli.**
Address of the Advocates : **K. Shivashankar, Nataraja .S.M,** Advocates
Sri Lakshml Complex, 2nd Floor, Sulibele Road, Devanahalli Town.

ಕನ್ನಡಪ್ರಭ ಮಂಗಳವಾರ
ವಿತ್ತಪ್ರಭ
ಅರ್ಥ ಜಗತ್ತಿನ ಆಪ್ತಮಿತ್ರ

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ
A Government of India Undertaking
Together We Can

ಪ್ರಧಾನ ಕಛೇರಿ, 112, ಜೆ.ಸಿ.ರಸ್ತೆ, ಬೆಂಗಳೂರು – 560 002.

**ವಾರ್ಷಿಕ ಮಹಾಸಭೆಯನ್ನು ದೃಶ್ಯ ಮಾಧ್ಯಮ (ಎನ್‌ಸಿ)/ ಇತರೆ ಶ್ರವಣದೃಶ್ಯ ವಿಧಾನಗಳ (ಓಎವಿಎಂ) ಮೂಲಕ ನಡೆಸಲಾಗುವುದು**
[ಒಬ್ಬ ಷೇರುದಾರ ನಿರ್ದೇಶಕರ ಆಯ್ಕೆಗೆ ಸಂಬಂಧಿಸಿದಂತೆ]

ಈ ಮೂಲಕ ಸೂಚಿವುದೇನೆಂದರೆ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಮತ್ತು ಸೆಕ್ಯೂರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಎಸ್‌ಇಬಿಐ) ಹೊರಡಿಸಿದ ಸುತ್ತೋಲೆಗಳ ಅನುಸಾರವಾಗಿ, ಸಭೆಯ ಸೂಚನಾ ಪತ್ರದಲ್ಲಿ ನೀಡಿರುವ ವ್ಯವಹಾರ ಚಟುವಟಿಕೆಗಳನ್ನು ನಡೆಸಲು ಬ್ಯಾಂಕ್‌ನ ವಾರ್ಷಿಕ ಮಹಾಸಭೆಯನ್ನು 27ನೇ ನವೆಂಬರ್ 2024 ರಂದು ಬುಧವಾರ ಬೆಳಿಗ್ಗೆ 11.00 ಗಂಟೆಗೆ ಐಎಸ್‌ಟಿ ದೃಶ್ಯ ಮಾಧ್ಯಮ (ಎನ್‌ಸಿ)/ಇತರೆ ಶ್ರವಣದೃಶ್ಯ ವಿಧಾನಗಳ (ಓಎವಿಎಂ) ಮೂಲಕ ನಡೆಸಲಾಗುವುದು.

ಮೇಲೆ ತಿಳಿಸಲಾದ ಸುತ್ತೋಲೆಗಳಿಗೆ ಅನ್ವಯಿಸುವಂತೆ, ವಾರ್ಷಿಕ ಮಹಾಸಭೆಯ ವಿದ್ಯುನ್ಮಾನ ಪ್ರತಿಗಳನ್ನು ಬ್ಯಾಂಕ್/ಠೇವಣಿ ಭಾಗವಹಿಸುವವರೊಂದಿಗೆ ಇ-ಮೇಲ್ ವಿಳಾಸಗಳನ್ನು ನೋಂದಾಯಿಸಿರುವ ಎಲ್ಲಾ ಷೇರುದಾರರಿಗೆ ಕಳುಹಿಸಲಾಗುತ್ತದೆ. ಡಿಮೆಟೀರಿಯಲೈಸ್ಡ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಮತ್ತು ಇಮೇಲ್ ಐಡಿಗಳನ್ನು ನೋಂದಾಯಿಸದಿರುವವರು ತಮ್ಮ ಇಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ತಮ್ಮ ಠೇವಣಿ ಭಾಗವಹಿಸುವವರೊಂದಿಗೆ ನೋಂದಾಯಿಸಲು ವಿನಂತಿಸಲಾಗಿದೆ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ತಮ್ಮ ಹಿಡುವಳಿಗಳನ್ನು ಡಿಮ್ಯಾಟ್ ಮಾಡಲು/ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು KFin ಟೆಕ್ನಾಲಜೀಸ್ ಲಿಮಿಟೆಡ್, ಬ್ಯಾಂಕ್‌ನ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟ್ einward.ris@kfintech.com ನಲ್ಲಿ ಒದಗಿಸುವಂತೆ ವಿನಂತಿಸಲಾಗಿದೆ. ಇಜಿಎಂ ನ ಸೂಚನಾ ಪತ್ರಗಳು ಬ್ಯಾಂಕ್‌ನ ವೆಬ್‌ಸೈಟ್ www.canarabank.com, ಷೇರು ವಿನಿಮಯ ವೆಬ್‌ಸೈಟ್‌ಗಳು ಮತ್ತು ಆರ್‌ಟಿಎ ವೆಬ್‌ಸೈಟ್ https://evoting.kfintech.com ನಲ್ಲಿ ಲಭ್ಯವಿದೆ.

ಇಜಿಎಂನ ಸೂಚನೆಯಲ್ಲಿ ಸೂಚಿಸಿದಂತೆ ಷೇರುದಾರರು ವ್ಯಾಪಾರದ ಮೇಲೆ ತಮ್ಮ ಮತವನ್ನು ದೂರದಿಂದಲೇ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಚಲಾಯಿಸಲು ಅವಕಾಶವನ್ನು ಹೊಂದಿರುತ್ತಾರೆ. ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಡಿಮೆಟೀರಿಯಲೈಸ್ಡ್ ಮಾದರಿಯಲ್ಲಿ, ಖುದ್ದಾಗಿ ಸಲ್ಲಿಸುವ ರೂಪದಲ್ಲಿ ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಷೇರುದಾರರಿಗೆ ರಿಮೋಟ್‌ನಲ್ಲಿ ಮತ ಚಲಾಯಿಸುವ ವಿಧಾನಗಳನ್ನು ಷೇರುದಾರರಿಗೆ ಸೂಚನಾ ಪತ್ರದಲ್ಲಿ ಒದಗಿಸಲಾಗಿದೆ. ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ವಿವರಗಳು ಲಭ್ಯವಿದೆ. ಅಂತಹ ವಿವರಗಳನ್ನು ಪಡೆಯಲು ಷೇರುದಾರರು www.canarabank.com ಗೆ ಭೇಟಿ ನೀಡುವಂತೆ ವಿನಂತಿಸಲಾಗಿದೆ.

ಮೇಲೆ ತಿಳಿಸಲಾದ ಸುತ್ತೋಲೆಗಳ ಅನುಸಾರ, ಬ್ಯಾಂಕಿನ ಷೇರುದಾರರಿಗೆ ಇಜಿಎಂ ಸೂಚನಾ ಪತ್ರಗಳ ಭೌತಿಕ ಪ್ರತಿಯನ್ನು ಕಳುಹಿಸುವುದಿಲ್ಲ ಎಂಬುದನ್ನು ಷೇರುದಾರರು ದಯವಿಟ್ಟು ಗಮನಿಸತಕ್ಕದ್ದು.

ನಿರ್ದೇಶಕರ ಮಂಡಳಿ ಆದೇಶದ ಮೇರೆಗೆ
ಕೆನರಾ ಬ್ಯಾಂಕ್ ಪರವಾಗಿ
ವ್ಯವಸ್ಥಾಪಕ ನಿರ್ದೇಶಕರು & ಸಿಇಓ
ದಿನಾಂಕ: 15.10.2024
ಸ್ಥಳ: ಬೆಂಗಳೂರು

**ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್**
(ಒಂದು ನಿಗದಿತ ವಾಣಿಜ್ಯ ಬ್ಯಾಂಕ್)
ನೋಂದಾಯಿತ ಕಚೇರಿ: ದಿ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ.10/1, 11/2 & 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ಪಕ್ಕ, ಚಲ್ಲಘಟ್ಟ, ಬೆಂಗಳೂರು–560071.

**ಇ–ಹರಾಜು ಸೂಚನೆ**

**ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು,2002ರ ನಿಯಮ 8(6) ಮತ್ತು 9 ರ ನಿಬಂಧನೆಯೊಂದಿಗೆ ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನ್ಯಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟಕ್ಕಾಗಿ ಇ–ಹರಾಜು ಮಾರಾಟ ಪ್ರಕಟಣೆ.**
ಸರ್ಫೇಸಿ ಕಾಯಿದೆಯ ಸೆಕ್ಷನ್ 13(4) ಅಡಿಯಲ್ಲಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಕೆಳಸಹಿದಾರರು ಅಧಿಕಾರಗಳನ್ನು ಚಲಾಯಿಸುವ ಮೂಲಕ ಈ ಕೆಳಗಿನ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಬ್ಯಾಂಕಿಗೆ ಬರಬೇಕಾದ ಬಾಕಿಗಳನ್ನು ಸಾರ್ವಜನಿಕರಿಗೆ ಮತ್ತು ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಲಾದ ಅಡಮಾನ ಇಟ್ಟಿರುವ ಸ್ವತ್ತುಗಳನ್ನು ಆನ್‌ಲೈನ್ ಹರಾಜು (ಇ–ಹರಾಜು) ಮೂಲಕ "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ" ಈ ಕೆಳಗೆ ನಿಗದಿಪಡಿಸಿದ ದಿನಾಂಕಂದು ಹರಾಜು ಮಾಡಲಾಗುತ್ತದೆ.

| ಕ್ರ. ಸಂ | ಸಾಲದ ಖಾತೆ ಸಂಖ್ಯೆ | ಸಾಲಗಾರರ/ಸಹ–ಸಾಲಗಾರರ/ ಜಾಮೀನುದಾರರ ಮೂಲ ಹೆಸರು | ಸೂಚನೆ ದಿನಾಂಕ 13–2 ರಂದು | ಸ್ವಾಧೀನ ದಿನಾಂಕ | 09.10.2024 ರಂದು ಇದ್ದಂತೆ ಪ್ರಸ್ತುತ ಬಾಕಿ ಮೊತ್ತ | ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ | ರೂ. ಗಳಲ್ಲಿ ಮೀಸಲು ಬೆಲೆ | ಮುಂಗಡ ಠೇವಣಿ (ಐಎನ್‌ಆರ್) | ಇ–ಹರಾಜಿನ ದಿನಾಂಕ ಮತ್ತು ಸಮಯ | ಬಿಡ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ ಮತ್ತು ಸ್ಥಳ |
|---|---|---|---|---|---|---|---|---|---|---|
| 1 | 46989630000691 | 1) ಶ್ರೀಮತಿ ಮಹಾಲಕ್ಷ್ಮಿ ಎಂ, 2) ಶ್ರೀ ಬಸವರಾಜು ಎಂ ವೈ, 3) ಶ್ರೀ ಸುನೀಲ್ ಕುಮಾರ್ ಎಂ ಬಿ | 09.05.2024 | 08.10.2024 | ರೂ. 10,66,584.10 (ರೂಪಾಯಿ ಹತ್ತು ಲಕ್ಷದ ಅರವತ್ತಾರು ಸಾವಿರದ ಐದು ನೂರ ಎಂಭತ್ತ ನಾಲ್ಕು ಮತ್ತು ಹತ್ತು ಪೈಸೆ ಮಾತ್ರ) | 06.11.2024 ರಂದು ಬೆಳಿಗ್ಗೆ 9:30 ರಿಂದ ಸಂಜೆ 05:00 ಗಂಟೆಯ ವರೆಗೆ | ರೂ.15,75,000/– (ರೂಪಾಯಿ ಹದಿನೈದು ಲಕ್ಷದ ಎಪ್ಪತ್ತೈದು ಸಾವಿರ ಮಾತ್ರ) | ರೂ.1,57,500/– (ರೂಪಾಯಿ ಒಂದು ಲಕ್ಷದ ಐವತ್ತೇಳು ಸಾವಿರದ ಐದು ನೂರು ಮಾತ್ರ) | 20.11.2024 ಮಧ್ಯಾಹ್ನ 02.00 ಗಂಟೆಗೆ | ದಿನಾಂಕ : 19.11.2024, ರಂದು ಸಂಜೆ 5.00 ಗಂಟೆಯ ವರೆಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್, ನೋಂದಾಯಿತ ಕಚೇರಿ: ದಿ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ.10/1, 11/2 & 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ಪಕ್ಕ, ಚಲ್ಲಘಟ್ಟ, ಬೆಂಗಳೂರು–560071. |

**ಅಡಮಾನ ಇಟ್ಟಿರುವ ಸ್ಥಿರಾಸ್ತಿ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಹೊಂದಿರುವ ಆಸ್ತಿಯ ನಿವೇಶನ ನಂ.63, ಆಸ್ತಿ ನಂ.63 ರಲ್ಲಿ, ಮರಳೇನಹಳ್ಳಿ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ.62, ಪಶ್ಚಿಮಕ್ಕೆ : ನಿವೇಶನ ನಂ.64, ಉತ್ತರಕ್ಕೆ : ನಿವೇಶನ ನಂ.78, ದಕ್ಷಿಣಕ್ಕೆ : ರಸ್ತೆ. ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 40 ಅಡಿ, ಒಟ್ಟು ವಿಸ್ತೀರ್ಣ : 1200 ಚದರ ಅಡಿ.

ಸ್ವತ್ತುಗಳನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ" 'ಆನ್ ಲೈನ್'ನಲ್ಲಿ ಇ–ಹರಾಜು ನಡೆಸಲಾಗುವುದು. ಬ್ಯಾಂಕಿನ ಅನುಮೋದಿತ ಸೇವಾದಾರರಾದ ಮೆ॥ 4 ಕ್ಲೋಸರ್‌ನ ವೆಬ್‌ಸೈಟ್ https://bankauctions.in & www.foreclosureindia.com ಪೋರ್ಟಲ್‌ನಲ್ಲಿ ಹರಾಜು ನಡೆಸಲಾಗುವುದು. ನಿರೀಕ್ಷಿತ ಬಿಡ್ಡಾರರು ಸಂಪರ್ಕಿಸಬಹುದು, ಹೆಚ್ಚಿನ ಮಾಹಿತಿ ಮತ್ತು ವಿವರಗಳಿಗಾಗಿ ಸಹಾಯ, ವಿಧಾನ ಮತ್ತು ಇ–ಹರಾಜಿನ ಆನ್‌ಲೈನ್ ತರಬೇತಿಗಾಗಿ ಮೆ॥ 4 ಕ್ಲೋಸರ್, ಶ್ರೀ ಶ್ರೀನಿವಾಸುಲು, ಸಂಪರ್ಕ ಸಂಖ್ಯೆ: 8142000809. ಇಮೇಲ್ ಐಡಿ: info@bankauctions.in/ srinivas@bankauctions.in ಇವರನ್ನ ಸಂಪರ್ಕಿಸಬಹುದು.
ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನಿಯಮಗಳು ಮತ್ತು ಷರತ್ತುಗಳ ಕುರಿತು ಹೆಚ್ಚಿನ ವಿವರಗಳಿಗಾಗಿ ಮತ್ತು ಆಸ್ತಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗೆ ದಯವಿಟ್ಟು ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಅಧಿಕೃತ ಅಧಿಕಾರಿಗಳು, ಶ್ರೀ ರಂಜನ್ ನಾಯಕ್ (ಮೊ.ಸಂ.6362951653) ಶ್ರೀ ಉಮೇಶ್ (ಮೊ.ಸಂ.8050149617) ಮತ್ತು ಶ್ರೀಮತಿ ಸಯೀದಾ (ಮೊ.ಸಂ.7400445147) ಅಧಿಕೃತ ಅಧಿಕಾರಿಯವರ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗಾಗಿ ಇವರನ್ನ ಸಂಪರ್ಕಿಸಬಹುದು, ಆಸ್ತಿಗಳ ಮೇಲೆ ಯಾವುದೇ ಹೊರೆಗಳಿಲ್ಲ. ಆದಾಗ್ಯೂ ಉದ್ದೇಶಿತ ಬಿಡ್‌ದಾರರು ಹೊರೆಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ವಿಚಾರಣೆಗಳನ್ನು ಮಾಡಬೇಕು. ತಮ್ಮ ಬಿಡ್ ಸಲ್ಲಿಸುವ ಮೊದಲು ಇರಿಸಲಾದ ಆಸ್ತಿಯ ಶೀರ್ಷಿಕೆ. ತಮ್ಮ ಬಿಡ್ ಸಲ್ಲಿಸುವ ಮೊದಲು ಆಸ್ತಿಯ ಶೀರ್ಷಿಕೆಯನ್ನು ಹೊಂದಿರಬೇಕು, ಯಾವುದೇ ಷರತ್ತುಬದ್ಧ ಬಿಡ್ ಅನ್ನು ಸ್ವೀಕರಿಸಲಾಗುವುದಿಲ್ಲ. ಅಡಮಾನದ ಆಸ್ತಿಗಳಿಗೆ ನಿಗದಿಪಡಿಸಲಾದ ಇ–ಹರಾಜಿನ ಕುರಿತು ಮೇಲೆ ತಿಳಿಸಲಾದ ಸಾಲಗಾರರು/ಜಾಮೀನುದಾರರು/ ಅಡಮಾನದಾರರಿಗೆ ಈ ಸೂಚನೆಯನ್ನು ನೀಡಲಾಗಿದೆ. ಸಾಲಗಾರರು /ಜಾಮೀನುದಾರರು / ಅಡಮಾನದಾರರಿಗೆ ಹರಾಜಿನ ದಿನಾಂಕದ ಮೊದಲು ಬಡ್ಡಿ ಮತ್ತು ಎಲ್ಲಾ ವೆಚ್ಚಗಳೊಂದಿಗೆ ಮೇಲೆ ತಿಳಿಸಿದಂತೆ ಮೊತ್ತವನ್ನು ಪಾವತಿಸಬೇಕು, ಒಂದು ವೇಳೆ ಉಳಿದಿರುವ ಬಾಕಿ ಮೊತ್ತ ಖರ್ಚು ವೆಚ್ಚಗಳನ್ನು ಮರುಪಾವತಿಸಲು ವಿಫಲರಾದರೆ ಆಸ್ತಿಯನ್ನು ಮಾರಾಟ ಮಾಡಲಾಗುವುದು ಎಂದು ಈ ಸೂಚನೆ ಮೂಲಕ ನೀಡಲಾಗುತ್ತದೆ.

ದಿನಾಂಕ: 15.10.2024, ಸ್ಥಳ: ಬೆಂಗಳೂರು ಗ್ರಾಮಾಂತರ
ಸಹಿ/– ಅಧಿಕೃತ ಅಧಿಕಾರಿಗಳು, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್